ತೆಗೆದುಕೊಳ್ಳೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ :– ತಾವು ಹೇಳಿದ್ದಕ್ಕೆ ನಾವು ತಲೆಬಾಗುತ್ತೇವೆ. ಪ್ರಶ್ನೆ ಮಧ್ಯದಲ್ಲಿ ಒಂದು ಉಪಪ್ರಶ್ನೆಯನ್ನೂ ನಾನು ಕೇಳಿಲ್ಲ. ನಿಜ. ನಾನು ವಾಕ್‌ಔಟ್ ಮಾಡಿದ್ದೆ. ತಾವು ಔದಾರ್ಯ ತೋರಿಸಿ ಕೊನೆಯಲ್ಲಿ ಅವಕಾಶ ಮಾಡಿಕೊಡುತ್ತೇನೆ ಎಂದು ಹೇಳಿದ್ದೀರಿ. 50–60 ಕೋಟಿಯಷ್ಟು ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗಿದೆ. ತಾವು ಅವಕಾಶ ಮಾಡಿಕೊಡಿ ಎಂದು ಪ್ರಾರ್ಥನೆ ಮಾಡಿದೆ.

ಅವಕಾಶ ಮಾಡಿಕೊಡುವುದಕ್ಕೆ ನಿಮಗೆ ಅಧಿಕಾರ ಇದೆ. ನಾಳೆ ಅವಕಾಶ ಕೊಡುತ್ತೀರಾ ?

ಉಪಾಧ್ಯಕ್ಷಿಣಿಯವರು:– ನಾಳೆ ಅವಕಾಶ ಮಾಡಿಕೊಡೋಣ. ಈಗ ಆ ಪ್ರಶ್ನೆಯನ್ನು ಹೆಲ್ಡ್ ಓವರ್ ಮಾಡಿದೆ. We will take it up. ಈಗ ಮುಖ್ಯಮಂತ್ರಿಗಳು, ಸಚಿವರುಗಳ ಪರಿಚಯ ಮಾಡಿಕೊಡುತ್ತಾರೆ.

ನೂತನ ಸಚಿವರುಗಳ ಪರಿಚಯ

ಶ್ರೀ ಎಂ. ವೀರಪ್ಪ ಮೊಯಿಲಿ (ಮಾನ್ಯ ಮುಖ್ಯಮಂತ್ರಿಗಳು):– ಮಾನ್ಯ ಉಪಾಧ್ಯಕ್ಷಣಿಯವರೇ, ನಾನು ಬಹಳ ಸಂತೋಷದಿಂದ ಸನ್ಮಾನ್ಯ ಸಚಿವರನ್ನು ಈ ಸದನಕ್ಕೆ ಪರಿಚಯ ಮಾಡಿಕೊಡುತ್ತಿದ್ದೇನೆ.

1. ಸನ್ಮಾನ್ಯ ಶ್ರೀ ಭೀಮಣ್ಣ ಖಂಡ್ರೆ	ಸಾರಿಗೆ ಸಚಿವರು
2. ಸನ್ಮಾನ್ಯ ಶ್ರೀ ಬ್ಲೇಸಿಯಸ್ ಎಂ. ಡಿಸೋಜ	ಕಾರ್ಮಿಕ ಸಚಿವರು

3. ಸನ್ಮಾನ್ಯ ಶ್ರೀ ಚೌಡರೆಡ್ಡಿ – ಇವರು ಇಂದು ಸದನಕ್ಕೆ ಬರುವುದಕ್ಕಾಗಿಲ್ಲ. ಏಕೆಂದರೆ, ಪೂಜ್ಯ ಶುವೆಂಪುರವರ ಜನ್ಮ ದಿವಸವಾದುದರಿಂದ, ತೀರ್ಥಹಳ್ಳಿಗೆ ಹೋಗಿದ್ದಾರೆ. ದಯಮಾಡಿ ಕ್ಷಮಿಸಬೇಕು. ನಾಳೆ ಅವರು ಬಂದ ಕೂಡಲೇ ಅವರ ಪರಿಚಯ ಮಾಡಿಕೊಡುತ್ತೇನೆ.

4. ಸನ್ಮಾನ್ಯ ಶ್ರೀ ಧರ್ಮಸಿಂಗ್	ಸಮಾಜ ಕಲ್ಯಾಣ ಸಚಿವರು
5. ಸನ್ಮಾನ್ಯ ಶ್ರೀ ಎಂ.ವೈ. ಘೋರ್ಪಡೆ	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು
6. ಸನ್ಮಾನ್ಯ ಶ್ರೀ ಗೋಪಿನಾಥ್ ಸಾಂದ್ರ	ವಸತಿ ಸಚಿವರು
7. ಸನ್ಮಾನ್ಯ ಶ್ರೀ ಹಾರ್ನಹಳ್ಳಿ ರಾಮಸ್ವಾಮಿ	ಕಾನೂನು ಮತ್ತು ಸಂಸದೀಯ ಸಚಿವರು
8. ಸನ್ಮಾನ್ಯ ಶ್ರೀ ಹುಚ್ಚಮಾಸ್ತಿಗೌಡ	ಕೃಷಿ ಸಚಿವರು
9. ಸನ್ಮಾನ್ಯ ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ	ಸಹಕಾರ ಸಚಿವರು
10. ಸನ್ಮಾನ್ಯ ಶ್ರೀ ಎಂ. ರಾಜಶೇಖರಮೂರ್ತಿ	ಕಂದಾಯ ಸಚಿವರು
11. ಸನ್ಮಾನ್ಯ ಶ್ರೀ ಕೆ.ಹೆಚ್. ರಂಗನಾಥ್	ಲೋಕೋಪಯೋಗಿ ಸಚಿವರು
12. ಸನ್ಮಾನ್ಯ ಶ್ರೀ ಎಸ್.ಎಂ. ಯಾಹ್ಯಾ	ಉನ್ನತ ಶಿಕ್ಷಣ ಸಚಿವರು
13. ಶ್ರೀಮತಿ ಮನೋರಮಾ ಮಧ್ವರಾಜ್	ಆಹಾರ ಸಚಿವರು

ಉಪಾಧ್ಯಕ್ಷಿಣಿಯವರು :– ಈಗ ನಾನು ಹೊಸದಾಗಿ ವಿರೋಧ ಪಕ್ಷದ ನಾಯಕರಾಗಿ ಶ್ರೀಯುತ ಆರ್.ವಿ. ದೇಶಪಾಂಡೆಯವರು ಆಯ್ಕೆಯಾಗಿದ್ದಾರೆ; ಅವರನ್ನು ಈ ಸಭೆಗೆ ಪರಿಚಯ ಮಾಡಿಕೊಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ :– ಒಂದು ಸಮಸ್ಯೆ ಏನಾಯಿತು ಎಂದು ಹೇಳಿದರೆ, ಮಾನ್ಯ ಮುಖ್ಯಮಂತ್ರಿಗಳು ತಮ್ಮ ಸಚಿವ ಸಂಪುಟದ ಸದಸ್ಯರನ್ನು ಪರಿಚಯ ಮಾಡಿಕೊಡುವಾಗ, ನಾವು ಸಂತೋಷದಿಂದ ಮೇಜು ಕುಟ್ಟುತ್ತಿದ್ದೇವೆ. ಆದರೆ, ಅಲ್ಲಿ ಕಾಂಗ್ರೆಸ್‌ನವರು ಒಬ್ಬರೂ ಮೇಜು

ಕುಟ್ಟುತ್ತಾ ಇಲ್ಲ.

ಉಪಾಧ್ಯಕ್ಷಿಣಿಯವರು :– ಅವರು ಮೊದಲೇ ಚಪ್ಪಾಳೆ ತಟ್ಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ :– ಮತ್ತೊಂದು ಪ್ರಶ್ನೆ, ಮುಂದಿನ ಸಚಿವ ಸಂಪುಟವನ್ನು ಯಾವತ್ತು ರಚನೆ ಮಾಡುತ್ತೀರಿ ಎನ್ನುವುದನ್ನು ಹೇಳಬೇಕು. ಏಕೆಂದರೆ, ಎಲ್ಲಾ ಇಲಾಖೆಗಳನ್ನೂ ಮುಖ್ಯಮಂತ್ರಿಗಳೊಬ್ಬರೇ ಇಟ್ಟುಕೊಂಡಿದ್ದಾರೆ. ಬದಲಾವಣೆ ಮಾಡುತ್ತೇನೆಂದು ಅನೇಕ ಸಾರಿ ಹೇಳಿದ್ದಾರೆ. ಆದ್ದರಿಂದ ಯಾವಾಗ ಸಂಪುಟ ವಿಸ್ತರಣೆ ಮಾಡುತ್ತಾರೆ ಎಂಬುದನ್ನು ತಿಳಿಸಬೇಕು.

ಉಪಾಧ್ಯಕ್ಷಿಣಿಯವರು :– ಸಂಪುಟವನ್ನು ಯಾವಾಗ ವಿಸ್ತರಣೆ ಮಾಡಿದರೂ ಕೂಡ, ನಿಮಗಂತೂ ಸಿಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ :– ನನಗೆ ಅವರು ಕೊಟ್ಟರೂ ಬೇಡ. ಮುಖ್ಯಮಂತ್ರಿಯವರ ಬಗ್ಗೆ ಬಹಳ ಗೌರವ ಇದೆ. ದಯಮಾಡಿ ಮುಂದಿನ ಮಂತ್ರಿಮಂಡಲವನ್ನು ಯಾವಾಗ ರಚನೆ ಮಾಡುತ್ತೀರಿ ಎನ್ನುವುದನ್ನು ಈ ರಾಜ್ಯಕ್ಕೆ ತಿಳಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ:– ನಿಮ್ಮಂಥ ಹಿರಿಯರ ಜೊತೆಯಲ್ಲಿ ಮಾತನಾಡಿ ಮಾಡೋಣ.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

I. ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):
ಮಾನ್ಯ ಉಪಾಧ್ಯಕ್ಷಿಣಿಯವರೆ, ಭಾರತ ಸಂವಿಧಾನದ ಅನುಚ್ಛೇದ 213 (2) (ಎ) ನೇ ಕಲಮಿನ ಮೇರೆಗೆ

1. 1992ನೇ ಇಸವಿಯ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ಆಧ್ಯಾದೇಶಕ್ಕೆ ಸಂಬಂಧಿಸಿದಂತೆ ದಿನಾಂಕ: 09–11–1992ರಂದು ಹೊರಡಿಸಲಾದ ಎಲ್ಎಡಬ್ಲ್ಯು:64: ಎಲ್ಜಿಎನ್: 92ನೇ ಕ್ರಮಾಂಕದ ಅಧಿಸೂಚನೆ.

2. 1992ನೇ ಇಸವಿಯ ಕರ್ನಾಟಕ ಸರಕುಗಳ ಪ್ರವೇಶದ ಮೇಲಿನ ತೆರಿಗೆಗೆ (ತಿದ್ದುಪಡಿ) (ಸಂ.2) ಆಧ್ಯಾದೇಶಕ್ಕೆ ಸಂಬಂಧಿಸಿದಂತೆ ದಿನಾಂಕ: 20–08–1992ರಂದು ಹೊರಡಿಸಲಾದ ಎಲ್ಎಡಬ್ಲ್ಯು:59:ಎಲ್ಜಿಎನ್ : 92ನೇ ಕ್ರಮಾಂಕದ ಅಧಿಸೂಚನೆ.

3. 1992ನೇ ಇಸವಿಯ ಕರ್ನಾಟಕ ಸರಕು ಪ್ರವೇಶಗಳ ತೆರಿಗೆ (2ನೇ ತಿದ್ದುಪಡಿ) ಆಧ್ಯಾದೇಶಕ್ಕೆ ಸಂಬಂಧಿಸಿದಂತೆ ದಿನಾಂಕ: 30–09–1992ರಂದು ಹೊರಡಿಸಲಾದ ಎಲ್ಎಡಬ್ಲ್ಯು : 66: ಎಲ್ಜಿಎನ್: 92ನೇ ಕ್ರಮಾಂಕದ ಅಧಿಸೂಚನೆ.

4. 1992ನೇ ಇಸವಿಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ತಿದ್ದುಪಡಿ ಆಧ್ಯಾದೇಶಕ್ಕೆ ಸಂಬಂಧಿಸಿದಂತೆ ದಿನಾಂಕ 24–07–1992ರಂದು ಹೊರಡಿಸಿದ ಎಲ್ಎಡಬ್ಲ್ಯು: 40: ಎಲ್ಜಿಎನ್; 92ನೇ ಕ್ರಮಾಂಕದ ಅಧಿಸೂಚನೆ.

1979ನೇ ಇಸವಿಯ ಸರಕು ಸಾಗಣೆಯ ಮೇಲಿನ ಕರ್ನಾಟಕ ತೆರಿಗೆ ಅಧಿನಿಯಮ (1979ನೇ ಇಸವಿಯ ಕರ್ನಾಟಕ ಅಧಿನಿಯಮ 27)ದ 3ನೇ ಕಲಮಿನ ಮೇರೆಗೆ :

5. ಬಳಕೆ ಮತ್ತು ಮಾರಾಟಕ್ಕಾಗಿ ಪ್ರತಿಯೊಂದು ಸ್ಥಳೀಯ ಪ್ರದೇಶದೊಳಗಡೆ ಬರುವ ಸರಕು ಸಾಗಾಣಿಕೆಯ ಮೇಲಿನ ಕರ್ನಾಟಕ ತೆರಿಗೆಗೆ ಸಂಬಂಧಿಸಿದಂತೆ ದಿನಾಂಕ : 30–04–1992ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಎಫ್ಡಿ : 69 : ಸಿಇಟಿ : 92